**(ದಿನಾಂಕಃ 05-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು)**

**ವಾಟೀಸವಾಲು : 2 ಮತ್ತು 5 ಪ್ರತಿವಾದಿಗಳ ಪರ ಶ್ರೀಮತಿ ಎಸ್ ಪಿ ಪಿ ವಕೀಲರಿಂದ -**

ನಾನು ಎಸ್ ಎಸ್ ಎಲ್ ಸಿ ವರಿಗೆ ಓದಿರುತ್ತೇನೆ. ನನ್ನ ಅಜ್ಜನ ಹೆಸರು ಕಾಡಪ್ಪ. ಅವರಿಗೆ ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬಳು ಹೆಣ್ಣು ಮಗಳು. ಅವರ ಹೆಸರು ಅಲ್ಲಪ್ಪ , ಸಿದ್ದಪ್ಪ ಮತ್ತು ಕಾಶವ್ವಾ ಇರುತ್ತದೆ. ಕಾಶವ್ವ ಇವರು 7 ವರುಷಗಳ ಹಿಂದೆ ತಿರಿಕೊಂಡಿದ್ದಾರೆ ಎಂದರೆ ನಿಜ. ಅವರ ಗಂಡನ ಹೆಸರು ಕಲ್ಲಪ್ಪ. ಕಾಶವ್ವ ಮತ್ತು ಕಲ್ಲಪ್ಪ ರಿಗೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳು ಇರುತ್ತಾಳೆ ಎಂದರೆ ನಿಜ. ಅವರ ಹೆಸರು ಕಾಡಪ್ಪ , ದುಂಡಪ್ಪ ಮತ್ತು ಅವಕ್ಕ ಎಂದರೆ ನಿಜ. ದುಂಡಪ್ಪ ಇವರು ನಾಲ್ಕು ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ ಎಂದರೆ ನಿಜ. ದುಂಡಪ್ಪ ನಿಗೆ ಸುವರ್ಣ ಎಂಬುವ ಹೆಂಡತಿ ಹಾಗೂ ಶಂಕರ ಎಬಂ ಮಗ ಇರುತ್ತಾರೆ ಎಂದರೆ ನಿಜ. ವಾದಪತ್ರದಲ್ಲಿ ಕಾಶವ್ವ ಳ ಹೆಸರನ್ನು ತೋರಿಸಿಲ್ಲ ಎಂದರೆ ನಿಜ. ಕಾಶವ್ವಳ ಮಕ್ಕಳ ಹೆಸರು ಹಾಗೂ ದುಂಡಪ್ಪನ ಹೆಂಡತಿ ಮತ್ತು ಮಕ್ಕಳ ಹೆಸರನ್ನು ಸಹ ತೋರಿಸಿಲ್ಲ ಎಂದರೆ ನಿಜ. ಕಾಶವ್ವಳ ಮೊಮ್ಮಕ್ಕಳನ್ನು ಪಕ್ಷಗಾರನ್ನಾಗಿ ಈ ದಾವೆಯಲ್ಲಿಮಾಡಿಲ್ಲ ಎಂದರೆ ನಿಜ. ಕಾಶವ್ವಳ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ನನಗೆ ಯಾವ ಅಡಚಣೆ ಇರಲಿಲ್ಲಎಂದರೆ ನಿಜ. ಸಾಕ್ಷಿ ಅವರ ಮದುವೆಯಾಗಿದ್ದರಿಂದ ಮಾಡಿಲ್ಲ ಎಂದು ಹೇಳುತ್ತಾರೆ. ಕಾಶವ್ವಳನ್ನು ವಂಶಾವಳಿಯಲ್ಲಿ ತೋರಿಸಲು ನನಗೆ ಯಾವ ಅಡಚಣೆ ಇರಲಿಲ್ಲಎಂದರೆ ನಿಜ.

**2.** ಅಲ್ಲಪ್ಪ ಮತ್ತು ಸಿದ್ದಪ್ಪರ ನಡುವೆ ಎಷ್ಟು ವರುಷಗಳ ಹಿಂದೆ ವಾಟ್ನಿ ಆಗಿತ್ತು ನನಗೆ ಗೊತ್ತಿಲ್ಲ. ವಾಟ್ನಿ ಆದ ಕಾಲಕ್ಕೆ ನನ್ನ ಅಜ್ಜ ಕಾಡಪ್ಪ ಜೀವಂತ ಎನ್ನುವುದು ನನಗೆ ಗೊತ್ತಿಲ್ಲ. ಅವರ ನಡುವೆ ಯಾವ ಜಮೀನು ಮತ್ತು ಮನೆಗಳಿಗೆ ಸಂಬಂಧಪಟ್ಟಂತೆ ವಾಟ್ನಿ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ವಾಟ್ನಿಯು ಬರವಣಿಗೆಯಲ್ಲಿ ಆಗಿತ್ತೊ ಇಲ್ಲವೊ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಅಲ್ಲಪ್ಪ ಮತ್ತು ಸಿದ್ದಪ್ಪರ ನಡುವೆ ವಾಟ್ನಿ ಆಗಿತ್ತು ಎಂದ ತೋರಿಸಲು ನನ್ನ ಹತ್ತಿರ ಯಾವ ದಾಖಲೆಗಳು ಇರುವುದಿಲ್ಲ. ಬಸ್ತವಾಡ ಗ್ರಾಮದಲ್ಲಿ ಅಲ್ಲಪ್ಪ ಮತ್ತು ಸಿದ್ದಪ್ಪರಿಗೆ ಸಂಬಂದಪಟ್ಟಂತೆ ಎರಡು ಮನೆಗಳು ಇವೆ. ಅಲ್ಲಪ್ಪನಿಗೆ ಬಂದ ಮನೆಯ ನಂಬರ ಹೇಳಲು ಬರುವುದಿಲ್ಲ. ಆದರೆ ಸಿದ್ದಪ್ಪನಿಗೆ ಬಂದ ಮನೆಯ ನಂಬರ ವಿ ಪಿ ಸಿ ನಂ. 199/1 ಇರುತ್ತದೆ. ವಿ ಪಿ ಸಿ ನಂ. 199/1 ನನ್ನ ತಂದೆಯ ಹಸೆರಿಗೆ ಬಂದಿತು ಎಂದು ತೋರಿಸಲು ಯಾವದೇ ಕಾಗದ ಪತ್ರ ಇರುವುದಿಲ್ಲ. ಸದರಿ ವಿ ಪಿ ಸಿ ನಂ. 199/1 ಕಟ್ಟಿದಂತಹ ಮನೆಯ ಜಾಗ ಹೇಗೆ ಬಂತು ನನಗೆ ಗೊತ್ತಿಲ್ಲ. ಆದರೆ 1972 ರಲ್ಲಿ ಸಿದ್ದಪ್ಪ ಮತ್ತು ಅಲ್ಲಪ್ಪ ಕೂಡಿ ಒಂದು ಮನೆಯನ್ನು ಕಟ್ಟಿದ್ದರು. ಇನ್ನೊಂದು ಮನೆ ಮುಂಚಿತವಾಗಿ ಕಟ್ಟಲಾಗಿತ್ತು. ಅದರ ನಂಬರ ನನಗೆ ಹೇಳಲು ಬರುವುದಿಲ್ಲ. ಸದರಿ ಆಸ್ತಿಯ ಉತಾರದಲ್ಲಿ ನನ್ನ ತಂದೆ ಹೆಸರು ಯಾವತ್ತು ನಮೂದು ಇರಲಿಲ್ಲ.

**3**. ಅಲ್ಲಪ್ಪ ಮತ್ತು ಸಿದ್ದಪ್ಪ ಇಬ್ಬರೂ ಕೂಡಿ ವಿ ಪಿ ಸಿ ನಂ. 199/1 ಮನೆಯನ್ನು ಕಟ್ಟಿ ದ್ದಾರೆ ಎಂದು ತೋರಿಸಲು ನನ್ನ ಬಳಿ ಯಾವ ದಾಖಲೆಗಳು ಇರುವುದಿಲ್ಲ. ಅಲ್ಲಪ್ಪ ಅವರು ಜೀವಂತ ಇದ್ದಾಗ

ಮಲ್ಲಿಕಾರ್ಜುನ ಶಿದ್ದಲಿಂಗಪ್ಪಾ ಪಟ್ಟಣಶೇಟ್ಟಿ ಇವರ 7 ಎಕರೆ ಹೊಲವನ್ನು ಬೆಳೆ ಪಾಲಿನ ಮೇಲೆ ಉಳುಮೆ ಮಾಡುತ್ತಿದ್ದರು ಎಂದರೆ ನಿಜ. ಅಲ್ಲಪ್ಪ ಒಬ್ಬರೇ ಹೊಲ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ನನ್ನ ತಂದೆ ಸಹ ಆ ಹೊಲವನ್ನು ಮಾಡುತ್ತಿದ್ದರು ಎಂದು ಹೇಳುತ್ತಾರೆ. ನನ್ನ ತಂದೆ ಯಾವತ್ತೂ ಮಲ್ಲಿಕಾರ್ಜುನ ಇವರ ಹೊಲವನ್ನು ಮಾಡಿಲ್ಲ ಎಂದರೆ ಸರಿಯಲ್ಲ. ವಿ ಪಿ ಸಿ ನಂ. 199 ಆಸ್ತಿಯು ಮೂಲತಃ ಗುರುಶಿದ್ದ ಲಗಮಪ್ಪ ವಂಟಮುರಿ ಇವರಿಗೆ ಸೇರಿತ್ತು ಎಂದರೆ ನಿಜ. ಸದರಿ ಆಸ್ತಿಯನ್ನು ಅಲ್ಲಪ್ಪ ವಂಟಮುರಿಯವರು ಗುರುಶಿದ್ದಪ್ಪ ಇವರ ಕಡೆಯಿಂದ 1970 ರಲ್ಲಿ ರೂ.400/- ಕ್ಕೆ ಖರೀದಿ ಮಾಡಿದ್ದರು ಎಂದರೆ ನಿಜ. ಸಾಕ್ಷಿಯು ಮುಂದುವರಿದು ಖರೀದಿ ಪತ್ರ ಆಗಿಲ್ಲಎಂದು ಹೇಳುತ್ತಾರೆ. ಅಲ್ಲಪ್ಪ ಇವರು ಮಲ್ಲಿಕಾರ್ಜುನ ಇವರ ಹೊಲದಿಂದ ಬಂದ ಉತ್ಪನ್ನದಿಂದ ಅಲ್ಲಿ ಮನೆ ಕಟ್ಟಿದ್ದಾರೆ ಎಂದರೆ ಸರಿಯಲ್ಲ.ಸಾಕ್ಷಿಯು ಇಬ್ಬರೂ ಸೇರಿ ಕಟ್ಟಿದ್ದಾಗಿ ಹೇಳುತ್ತಾರೆ. ಕಾಡಪ್ಪನಿಗೆ 6 ತಿಂಗಳು ವಯಸ್ಸಾದಾಗಿಂದಲೂ ಅಲ್ಲಪ್ಪ ಮತ್ತು ಅವಕ್ಕ ಇವರ ಜೊತೆ ವಾಸ ಮಾಡುತ್ತಿದ್ದ ಎಂದರೆ ನಿಜ. ಅಲ್ಲಪ್ಪ ಮತ್ತು ಅವಕ್ಕ ಇವರಿಗೆ ಮಕ್ಕಳು ಇರಲಿಲ್ಲ ಎಂದರೆ ನಿಜ. ಅಲ್ಲಪ್ಪ ಇವರು ಕಾಡಪ್ಪನಿಗೆ ಸದರಿ ಮನೆಯನ್ನು ಹಕ್ಕು ಬಿಟ್ಟುಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ಮನೆಯನ್ನು ಕಟ್ಟಿದಾಗಿನಿಂದ ಅಲ್ಲಪ್ಪ ಮತ್ತು ಅವಕ್ಕ ಮತ್ತು ಕಾಡಪ್ಪ ಅದೇ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. 1976 ನೇಇಸವಿಯಿಂದ ಇಲ್ಲಿಯವರೆಗೆ ಕಾಡಪ್ಪನ ಹೆಸರೇ ವಿ ಪಿ ಸಿ ನಂ. 199 ರಲ್ಲಿ ಮುಂದುವರೆದುಕೊಂಡು ಬಂದಿದೆ ಎಂದರೆ ಸರಿಯಲ್ಲ. ವಿ ಪಿ ಸಿ ನಂ. 199 ಮನೆಯಲ್ಲಿ ಅರ್ಧ ಹಿಸ್ಸೆ ಯನ್ನು ತನ್ನ ಹೆಂಡತಿ ಸಂಗೀತಾ ಇವರಿಗೆ ದಿಃ 15-12-2009 ರಲ್ಲಿ ಹಕ್ಕು ಬಿಟ್ಟು ಪತ್ರದ ಮೂಲಕ ಕೊಟ್ಟಿದ್ದಾನೆ ಎಂದರೆ ಸರಿಯಲ್ಲ. ಆ ಪ್ರಕಾರ ಸಂಗೀತಾ ಹೆಸರು ಅರ್ದ ಹಿಸ್ಸೇಗೆ ದಾಖಲಾಗಿದೆ ಎಂದರೆ ಸರಿಯಲ್ಲ.

4. 2014 ರಲ್ಲಿ ಕಾಡಪ್ಪನಿಗೆ ಗೊತ್ತಾಗದ ಹಾಗೇ ನನ್ನ ಹೆಸರನ್ನು ವಿ ಪಿ ಸಿ ನಂ. 199 ರಲ್ಲಿ ನಮೂದು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಅಂದಿನಿಂದ ವಿ ಪಿ ಸಿ ನಂ. 199 ಹಾಗೂ ವಿ ಪಿ ಸಿ ನಂ. 199/1 ಎಂದು ಎರಡು ಉತಾರಗಳು ಬರುತ್ತಿವೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ದಾವೆ ಮಾಡುವವರೆಗೂ ಸದರಿ ವಿಷಯ ಗೊತ್ತಿರಲಿಲ್ಲಎಂದರೆ ಸರಿಯಲ್ಲ. ಸಾಕ್ಷಿ 2014 ರಲ್ಲಿ ಸಿದ್ದಪ್ಪ ಮತ್ತು ನನ್ನ ಹೆಸರಿನಲ್ಲಿ ಬ್ಯಾಂಕನಲ್ಲಿ ರೂ2,40,000 ಸಾಲ ಇತ್ತು. ಸದರಿ ಸಾಲವನ್ನು ತುಂಬಲು ಪಂಚರ ಹೇಳಿದ ಮೇರಗೆ ಆ ಮನೆಯ ಮೇಲೆ ಅರ್ದ ಹಿಸ್ಸೆಗಾಗಿ ರೂ.1,60,000 ಗಳನ್ನುಯುನಿಯನ್ ಬ್ಯಾಂಕ ಹೆಬ್ಬಾಳ ಕ್ಕೆ ತುಂಬಿ, ಸದರಿ ಮನೆಯಲ್ಲಿ ಅರ್ದ ಹಿಸ್ಸೆಯನ್ನು ನನ್ನ ಹೆಸರಿಗೆ ಮಾಡಿಕೊಂಡಿದ್ದೆನೆ ಎಂದು ಹೇಳುತ್ತಾರೆ. ಸದರಿ ಸಾಲವನ್ನು ತುಂಬಪಿದ ಬಗ್ಗೆ ಕಾಗದ ಪತ್ರ ಇದ್ದು ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೇನೆ. ಸದರಿ ಬ್ಯಾಂಕನಲ್ಲಿ ಸಾಲ ಇತ್ತು, ರೂ.1,60,000 ಗಳನ್ನು ನಾನು ತುಂಬಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಸದರಿ ಆಸ್ತಿಗೆ ವಿ ಪಿ ಸಿ ನಂ. 199 ಗೆ ಸಂಬಂಧಪಟ್ಟಂತೆ ಕಾಡಪ್ಪ ಇವರು ಸಬ್ ರಜಿಸ್ಟಾರ ಕಚೇರಿಯಲ್ಲಿ ನನಗೆ ನೊಂದಣಿ ಪತ್ರ ಮಾಡಿಕೊಟ್ಟಿಲ್ಲ . ಸದರಿ ಮನೆಯ ಮೇಲೆ ನನಗಾಗ್ಲಿ ಮತ್ತು ನನ್ನ ತಂದೆ ತಾಯಿ ಮತ್ತು ತಂಗಿಗಾಗಲಿ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ಸದರಿ ವಿ ಪಿ ಸಿ ನಂ. 199 ಮನೆಯಲ್ಲಿ ಅಲ್ಲಪ್ಪ ಮತ್ತು ಅವಕ್ಕ ಮತ್ತು ಕಾಡಪ್ಪ ಮಾತ್ರ ವಾಸವಾಗಿದ್ದರು, ಸಿದ್ದಪ್ಪ , ಗಂಗವ್ವ , ಅಕ್ಕಮ್ಮ ಮತ್ತು ನಾನು ಯಾವತ್ತು ವಾಸವಾಗಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ವಾಟೀಸವಾಲು ಃ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮೂಂದುಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

(ಆದಿತ್ಯ ಆರ್. ಕಲಾಲ್)
ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ